ದಿನಾಂಕ 29.03.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 1 ಮತ್ತು 4 ನೇ ಎದುರುದಾರರ ಪರ ಶ್ರೀ ಕೆ.ಎಂ.ಜೆ ವಕೀಲರಿಂದಃ-

3. ಅಸಲುದಾವಾ ಸಂಖ್ಯೆ 121/2014 ರಲ್ಲಿ ಆದೇಶವಾಗಿದೆ ಎನ್ನುವ ವಿಚಾರ ನನಗೆ 2019 ರ ಡಿಸೆಂಬರ್‌ನಲ್ಲಿ ಗೊತ್ತಾಗಿರುತ್ತದೆ. ಈ ವಿಚಾರದ ಬಗ್ಗೆ ನಮ್ಮ ಊರಿನ ಜನರಿಂದ ಗೊತ್ತಾಗಿರುತ್ತದೆ. ಸದರಿ ದಾವೆಯನ್ನು ದಾಖಲಿಸಲಾಗಿದೆ ಎನ್ನುವ ವಿಚಾರವನ್ನು ನನಗೆ ಬೈರಪ್ಪ, ಸಣ್ಣಪ್ಪ ಹಾಗೂ ಚಿಕ್ಕಣ್ಣ ತಿಳಿಸಿರುತ್ತಾರೆ. ಸದರಿ ದಾವೆ ತೀರ್ಮಾನವಾಗಿದೆ ಎನ್ನುವ ವಿಚಾರವನ್ನು ನನಗೆ ಯಾರೂ ತಿಳಿಸಿಲ್ಲ. ಪುಟ್ಟನರಸಮ್ಮ ನನ್ನ ತಾಯಿ. ಸಿದ್ದಣ್ಣ ನನ್ನ ಅಣ್ಣ. ಕಾಸಯ್ಯ ನನ್ನ ತಮ್ಮ. ದೇವಮ್ಮ ನನ್ನ ತಂಗಿ. ಅಸಲುದಾವಾ ಸಂಖ್ಯೆ 121/2014 ರಲ್ಲಿ ಮೇಲೆ ಹೇಳಲಾದ ನನ್ನ ತಂದೆ ತಾಯಿ, ನನ್ನ ತಮ್ಮ, ನನ್ನ ಅಣ್ಣ ತಮ್ಮ ಹಾಗೂ ತಂಗಿಗೆ ನೋಟಿಸ್ ಜಾರಿಯಾಗಿತ್ತು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿನ ಆದೇಶವನ್ನು ಪ್ರಶ್ನಿಸಿ ತಿಮ್ಮಶೆಟ್ಟಿ, 5, 7 ಹಾಗೂ 8 ನೇ ಎದುರುದಾರರು ಎಫ್.ಆರ್ ನಂ.2417/2019 ರಲ್ಲಿ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿ ಸಂಖ್ಯೆ 117/2020 ಎಂದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿ ಪ್ರಕರಣದಲ್ಲಿ ನಮ್ಮೆಲ್ಲರಿಗೂ ನೋಟಸ್ ಜಾರಿಯಾಗಿದ್ದು ನಾವು ನಮ್ಮ ಪರ ವಕೀಲರನ್ನು ನೇಮಿಸಿಕೊಂಡಿದ್ದೇವೆ ಎನ್ನುವುದು ಸರಿಯಲ್ಲ. ಸದರಿ ಮೇಲ್ಮನವಿ ಪ್ರಕರಣದಲ್ಲಿ ನನ್ನ ಪರ ಶ್ರೀ ಹೆಚ್.ಜಯಂತ್ ಎಂಬ ವಕೀಲರನ್ನು ನೇಮಿಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ಈಗ ನನಗೆ ತೋರಿಸಲಾದ ವಕಾಲತ್‌ನಾಮೆಯಲ್ಲಿನ ಸಹಿ ನನ್ನದೇ ಇರುತ್ತದೆ

ಎನ್ನುವುದು ನಿಜ. ಸಾಕ್ಷಿಗೆ ತೋರಿಸಲಾದ ದಾಖಲೆಯು ಆರ್.ಎಫ್.ಎ ನಂ.117/2020 ರಲ್ಲಿ ಸಲ್ಲಿಸಲಾಗಿರುವ ದಿನಾಂಕ 14.09.2021 ರ ವಕಾಲತ್‌ನಾಮೆಯ ದೃಢೀಕೃತ ನಕಲುಪ್ರತಿಯಾಗಿದ್ದು, ಸದರಿ ದಾಖಲೆಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ ಕಾರಣ ಸದರಿ ದಾಖಲೆಯನ್ನು **ನಿಆರ್-**1 ಎಂದು ಗುರುತಿಸಲಾಯಿತು. ಸದರಿ ನಿಆರ್-1 ರಲ್ಲಿ ನನ್ನ ತಮ್ಮ ಕಾಸಯ್ಯ, ನನ್ನ ಅಣ್ಣ ಸಿದ್ದಣ್ಣ ಹಾಗೂ ನನ್ನ ತಂಗಿ ದೇವಮ್ಮ ಸಹಿ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ಸದರಿ ಮೇಲ್ಮನವಿಯಲ್ಲಿ ಗಂಗಮಾರಯ್ಯ, ಕಗ್ಗಲ್ಲಯ್ಯ ಹಾಗೂ ಮಲ್ಲೇಶ ಸಹ ನಾವು ನೇಮಿಸಿರುವ ವಕೀಲರನ್ನೇ ನೇಮಿಸಿದ್ದಾರೆ ಎನ್ನುವುದು ಸರಿಯಲ್ಲ. ಈ ಪ್ರಕರಣದ 5, 7 ಹಾಗೂ 9 ನೇ ಎದುರುದಾರರು ಹಾಗೂ ತಿಮ್ಮಶೆಟ್ಟಿ, ಸದರಿ ಮೇಲ್ಮನವಿಯ ಮೇಲ್ಮನವಿದಾರರು ಎನ್ನುವುದು ನಿಜ.

4. ಅಸಲುದಾವಾ ಸಂಖ್ಯೆ 121/2014 ರಲ್ಲಿ ನಾನು, 13 ಹಾಗೂ 14 ನೇ ಎದುರುದಾರರು ಹಾಗೂ ಗಂಗಮಾರಯ್ಯ ಹಾಜರಾಗುತ್ತಿದ್ದೆವು ಎನ್ನುವುದು ಸರಿಯಲ್ಲ. ನನಗೆ ಸದರಿ ದಾವೆ ತೀರ್ಮಾನವಾದ ವಿಚಾರ ಡಿಸೆಂಬರ್ 2019 ರಲ್ಲಿ ಗೊತ್ತಾಯಿತು ಎಂದು ನಾನು ಹೇಳುತ್ತಿರುವ ವಿಚಾರ ಸುಳ್ಳು ಎನ್ನುವುದು ಹಾಗೂ ಮೇಲೆ ಹೇಳಲಾದ 5, 7, 9 ನೇ ಎದುರುದಾರರು ಹಾಗೂ ತಿಮ್ಮಶೆಟ್ಟಿ ಮೇಲ್ಮನವಿ ಸಲ್ಲಿಸಿದ್ದ ವಿಚಾರ ನನಗೆ ಮೊದಲೇ ಗೊತ್ತಿತ್ತು ಎನ್ನುವುದು ಸರಿಯಲ್ಲ. ಸದರಿ ಮೇಲ್ಮನವಿ ಪ್ರಕರಣದಲ್ಲಿ ಈಗಾಗಲೇ ನಮ್ಮ ಪರ ವಕಾಲತ್ತನ್ನು ಸಲ್ಲಿಸಲಾಗಿದ್ದು, ಅಸಲುದಾವಾ ಸಂಖ್ಯೆ 121/2014 ರಲ್ಲಿ ತೀರ್ಮಾನವಾದ ವಿಚಾರ ನಮಗೆ ಮೊದಲೇ ಗೊತ್ತಿತ್ತು ಎನ್ನುವುದು ಸರಿಯಲ್ಲ. ಅಸಲುದಾವಾ ಸಂಖ್ಯೆ 121/2014 ರ ತೀರ್ಪಿನನ್ವಯ ಈಗಾಗಲೇ ಎಫ್.ಡಿ.ಪಿ 1/2020 ಹಾಗೂ

ಎಫ್.ಡಿ.ಪಿ 3/2020 ಎಂಬ ಪ್ರಕರಣಗಳು ದಾಖಲಾಗಿ, ಸದರಿ ಪ್ರಕರಣಗಳ ಚಾಲ್ತಿಯಲ್ಲಿವೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಅದರಂತೆ ನ್ಯಾಯಾಲಯದ ನಿಯೋಗಿ ಸ್ಥಳಕ್ಕೆ ಬಂದು ಅಂತಿಮ ಡಿಕ್ರಿ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತಾರೆಂಬ ಉದ್ದೇಶದಿಂದ ಅದಕ್ಕೆ ತಡೆ ಮಾಡಬೇಕೆಂದು ಈ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿದೆ ಎನ್ನುವುದು ಸರಿಯಲ್ಲ. ಉದ್ದೇಶಪೂರ್ವಕವಾಗಿ ವಿಳಂಬ ಮಾಡಿ ಪ್ರಸ್ತುತ ಪ್ರಕರಣವನ್ನು ದಾಖಲಿಸಿದ್ದೇವೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.